# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

**ಸಿ ಸಿ ನಂಃ59/2022**

**ಡಿಡಬ್ಲೂ-1**

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ08.05.2026**

ಹೆಸರು : ಭರತ್ ಕುಮಾರ್ ತಂದೆ ಬಿ ಎಸ್ ಹಾಲಪ್ಪ

ವಯಸ್ಸು : **30** ವರ್ಷ

ಉದ್ಯೋಗ : ನಿರುದ್ಯೋಗಿ

ವಿಳಾಸ : ಬಸವೇಶ್ವರ ನಿಲಯ ರಾಮಾಲಯ ರಸ್ತೆ , ಜಗಳೂರು ಟೌನ್

**ಮುಖ್ಯ ವಿಚಾರಣೆ :** ಆರೋಪಿ **ಪರ ವಕೀಲರಿಂದಃ**

ಪಿರ್ಯಾದಿ ನನಗೆ ಕಳೆದ 10 ವರ್ಷದಿಂದ ಪರಿಚಯ ಇರುತ್ತಾರೆ . ಪಿರ್ಯಾದಿಯು ಆಭರಣದ ಅಂಗಡಿ ಇಟ್ಟಿರುತ್ತಾರೆ . ನನಗೆ ಭರತ್ ರಾಜ್ ಎಂಬುವವರು ಕಳೆದ 10 ವರ್ಷದಿಂದ ಪರಿಚಯ ಇರುತ್ತಾರ. ನನಗೆ ಲೋಕೇಶ್ ಮತ್ತು ಮಹಾಂತೇಶ್ ಅವರು ಪರಿಚಯ ಇರುವುದಿಲ್ಲ . ಅವರನ್ನು ನ್ಯಾಯಾಲಯಲ್ಲೀ ನೋಡಿರುತ್ತೇನೆ . ನನಗೆ ಈ ಪ್ರಕರಣದ ಪಿರ್ಯಾದಿ ಕಳುಹಿಸಿದ ನೋಟೀಸ್ ತಲುಪಿರುವುದಿಲ್ಲ . ನನ್ನ ವಿರುದ್ದ ಮಹಾಂತೇಶ್ ಎಂಬುವವರು ಸುಳ್ಳು ಚೆಕ್ ಅಮಾನತು ಪ್ರಕರಣವನ್ನು ದಾಖಲಿಸಿರುತತಾರೆ . ನಾನು ಅವರು ವಿರುದ್ದ PCR 19/2022 ಪಿರ್ಯಾದಿ ನ್ಯಾಯಾಲಯದಲ್ಲಿ ದಾಖಲಿಸಿರುತ್ತೇನೆ . ಸದರಿ ಪಿರ್ಯಾದಿ ಅನ್ನು ಈ ಪ್ರಕರಣದ ಪಿರ್ಯಾದಿ ಮಂಜುನಾಥ , ಲೋಕೇಶ್ ಭರತ್ ರಾಜ್ ಮತ್ತು ಮಾಹಂತೇಶ್ ವಿರುದ್ದ ಸಲ್ಲಿಸಿರುತ್ತೇನೆ . ನಾನು ಪಿರ್ಯಾದಿ ಮಂಜುನಾಥ ನಿಂದ ಯಾವುದೇ ಹಣ ಪಡೆದಿರುವುದಿಲ್ಲ . ನಾನು ಪಿರ್ಯಾದಿಗೆ ಸದರಿ ಸಾಲದ ತಿರುವಳಿ ಬಾಬ್ತು ಯಾವುದೇ ಚೆಕ್ ನೀಡಿರುವುದಿಲ್ಲ . ನಿಪಿ 1 ಚೆಕ್ ನಲ್ಲಿ ಕಾಣುವ ಸಹಿ ನನ್ನದು ಇರುವುದಿಲ್ಲ . ಈ ಹಿಂದೆ ಪಿರ್ಯಾದಿ ಮತ್ತು ಭರತ್ ರಾಜ್ ಅವರು ನಮ್ಮ ಅಂಗಡಿಗೆ ಬಂದುಹೋಗಿ ಮಾಡುತ್ತಿದ್ದರು , ಆ ಸಂದರ್ಭದಲ್ಲಿ ನಾನು ಸಹಿ ಮಾಡದೇ ಇಟ್ಟಿದ್ದ 9 ಚೆಕ್ ಗಳನ್ನು ಕಳ್ಳತನ ಮಾಡಿರುತ್ತಾರೆ . ಸದರಿ ಚೆಕ್ ಗಳನ್ನು ನಾನು ನನ್ನ ಅಂಗಡಿ

ವ್ಯವಹಾರಕ್ಕೆ ಬಳಸಿಕೊಳ್ಳಲು ಸಹಿ ಮಾಡದೇ ಇಟ್ಟಿರುತ್ತೇನೆ . ದಿಃ 15.11.2020 ರಂದು ಪಿರ್ಯಾದಿ ಮಂಜುನಾಥ ಮತ್ತು ಭರತ್ ರಾಜ್ ಅವರು ನಮ್ಮ ಮನೆಗೆ ಬಂದು ಗಲಾಟೆ ಮಾಡಿರುತ್ತಾರೆ . ಅವರು ನನಗೆ ಹಣವನ್ನು ನೀಡದೇ ಇದ್ದರೇ ನಿನ್ನ ಮೇಲೆ ಚೆಕ್ ಅಮಾನತು ಪ್ರಕರಣಗಳನ್ನು ದಾಖಲಿಸುವುದಾಗಿ ಬೆದರಿಕೆ ಹಾಕಿರುತ್ತಾರೆ . ನಂತರ ಅವರು ವಿರುದ್ದ ನಾನು PCR 19/2022 ದಾಖಲಿಸಿರುತ್ತೇನೆ . ನಿಪಿ 1 ಚೆಕ್ ನ ಸಂಖ್ಯೆ 775646 ಚೆಕ್ ಅನ್ನು 5 ಲಕ್ಷ ರೂಪಾಯಿಗೆ ಸಲ್ಲಿಸಿರುತ್ತಾರೆ . ನಿಪಿ 1 ಚೆಕ್ ನಲ್ಲಿ ಇರುವ ಬರವಣಿಗೆ ಮತ್ತು ಸಹಿ ನನ್ನದು ಇರುವುದಿಲ್ಲ . ನಿಪಿ 1 ಚೆಕ್ ಮಾತ್ರ ನನ್ನ ಬ್ಯಾಂಕಿಗೆ ಸಂಬಂಧಿಸಿದ್ದು ಇರುತ್ತದೆ . ಪಿರ್ಯಾದಿ ಮಂಜುನಾಥ ಮತ್ತುಭರತ್ ರಾಜ್ ಅವರು ಸೇರಿಕೊಂಡು ನನ್ನಿಂದ ಹಣ ವಸೂಲಿ ಮಾಡಲು ನಿಪಿ 1 ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪಿರ್ಯಾದು ಸಲ್ಲಿಸಿರುತ್ತಾರೆ . ಈ ಪ್ರಕರಣ ದಾಖಲಾದಾಗಲಿನಿಂದ ನನ್ನ ಮಾನ ಹಾನಿಯಾಗಿರುತ್ತದೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**Sd/-**

**ಪ್ರ.ದ.ನ್ಯಾ.ದಂ., ಜಗಳೂರು**